9

# ಬೈಬಲಿನ ಬಾಪ್ತಿಸ್ಮ

ಹೊಸ ಒಡಂಬಡಿಕೆಯ ದೊಡ್ಡ ವಿಷಯಗಳಲ್ಲಿ ಬಾಪ್ತಿಸ್ಮ ಒಂದಾಗಿದೆ. "ಬಾಪ್ತಿಸ್ಮ" ಎಂಬ ಪದವು ಅದರ ಅನೇಕ ರೂಪಗಳೊಂದಿಗೆ, ಹೊಸ ಒಡಂಬಡಿಕೆಯಲ್ಲಿ ಒಂದು ನೂರು ಸಲಕ್ಕಿಂತಲೂ ಹೆಚ್ಚು ಸಲ ನಮೂದಿಸಲ್ಪಟ್ಟಿದೆ. ಹೀಗಿದ್ದರೂ ಧಾರ್ಮಿಕ ಜಗತ್ತಿನಲ್ಲಿ ಈ ವಿಷಯದ ಮೇಲೆ ಬಹಳ ಗಲಿಬಿಲಿ ಯಿರುತ್ತದೆ. ಇದರ ಬಗ್ಗೆ ಬೈಬಲು ನಿಜವಾಗಿಯೂ ಏನು ಹೇಳುತ್ತದೆ?

## ಬಾಪ್ತಿಸ್ಮವು ಏನಾಗಿದೆ?

"ಬಾಪ್ತಿಸ್ಮವು ಏನಾಗಿದೆ?" ಎಂಬ ಪ್ರಶ್ನೆಯೊಂದಿಗೆ ಬಾಪ್ತಿಸ್ಮದ ನಮ್ಮ ಅಧ್ಯಯನವು ಪ್ರಾರಂಭಿಸಲ್ಪಡತಕ್ಕದು. ಅಂದರೆ ಬಾಪ್ತಿಸ್ಮದಲ್ಲಿ ಯಾವ ಕಾರ್ಯ ಮಾಡಲ್ಪಡುತ್ತದೆ: ಮುಳುಗೇಳಿಸುವಿಕೆ, ಚಿಮುಕಿಸುವಿಕೆ ಇಲ್ಲವೇ ಸುರಿಯುವಿಕೆ? "ಬ್ಯಾಪ್ಟಿಸಮ್" ಎಂಬ ಪದವು ಈ ಮೂರು ಕಾರ್ಯಗಳಲ್ಲಿ ಒಂದರ ಅರ್ಥವಾಗಬಹುದೋ? ಅನೇಕ ವರ್ಷಗಳಿಂದ ಇದು ವಾದವಿವಾದಕ್ಕೊಳಗಾದ ವಿಷಯವಾಗಿದೆ. ಆದರೆ ಹೊಸ ಒಡಂಬಡಿಕೆಯು ಬರೆಯಲ್ಪಡುತ್ತಿದ್ದ ದಿನಗಳಲ್ಲಿ ಯಾವುದೇ ವಾದವಿವಾದವಿರಲಿಲ್ಲ ವೆಂಬಂತೆ ತೋರುತ್ತದೆ. ವಿವಿಧ ವಾಗ್ವಾದಗಳು ಸಂಭವಿಸಿದವು ಹಾಗೂ ಪರಿಶುದ್ಧ ಬರಹಗಳಲ್ಲಿ ಅವುಗಳ ಬಗ್ಗೆ ಹೇಳಲ್ಪಟ್ಟಿದೆ; ಆದರೆ "ಬ್ಯಾಪ್ಟಾಯ್ಜ" ಎಂಬ ಪದದ ಅರ್ಥದ ಮೇಲೆ ಯಾವುದೇ ವಾದವಿವಾದ ಸೂಚನೆಯನ್ನು ನಾವು ಕಂಡುಕೊಳ್ಳುವದಿಲ್ಲ.

### ಪದಗಳಿಂದ ನಿರೂಪಿಸಲ್ಪಟ್ಟಿದ್ದು

"ಬ್ಯಾಪ್ಟಾಯ್ಜ" ಎಂಬುದು ಗ್ರೀಕ್ ಪದದ ಆಂಗ್ಲೀಕರಣವಾಗಿದೆ. ಅದರ ಪ್ರಾಥಮಿಕ ಅರ್ಥವು "ಅದ್ದು" ಎಂಬುದಾಗಿದೆ. ಈ ಸಂಗತಿಯನ್ನು ಗ್ರೀಕ ಶಬ್ದಗಳನ್ನು ವಿವರಿಸುವ ಗ್ರೀಕ ಲೆಕ್ಸಿಕಾನಿನಲ್ಲಿ ನೋಡುವದರಿಂದ ಕಲಿತುಕೊಳ್ಳುತ್ತೇವೆ. ಪ್ರಥಮ ಶತಮಾನದಲ್ಲಿಯ ಇಂಗ್ಲೀಷ್ ಕೋಶಕ್ಕೆ ಹೋಗಿ ಈ ಗ್ರೀಕ ಪದದ ಅರ್ಥವನ್ನು ಕಲಿತುಕೊಳ್ಳಲಾರೆವು, "ಬ್ಯಾಪ್ಟಾಯ್ಜ" ಎಂಬ ಪದದ ಅರ್ಥವನ್ನು ಕಂಡುಕೊಳ್ಳಲಾರೆವು. ಇಂಗ್ಲೀಷ್ ಪದದ ಕೋಶಗಳು ಸಾಮಾನ್ಯವಾಗಿ ಸ್ವೀಕೃತವಾದ ಆಧುನಿಕ ರೀತಿಯಲ್ಲಿ ವಿವರಿಸಲಿಪಟ್ಟ ಪ್ರಥಮ ಶತಮಾನದಲ್ಲಿ ಉಪಯೋಗಿಸಲ್ಪಟ್ಟ ಗ್ರೀಕ ಪದದ ಅರ್ಥಗಳ ಪ್ರಕಾರವಾಗಿ ವಿವರಿಸಲ್ಪಪಟ್ಟಿರುವದಿಲ್ಲ.

"ಚಿಮುಕಿಸು" ಎಂಬ ಅರ್ಥ ಕೊಡುವ ಒಂದು ಗ್ರೀಕ ಪದವಿದೆ; ಅದರ ಇಂಗ್ಲೀಷ್ ರೂಪವು *rantize*. ಅದೇ ರೀತಿಯಲ್ಲಿ "ಸುರಿಸಲು" ಎಂಬ ಅರ್ಥವುಳ್ಳ ಗ್ರೀಕ ಪದವಿದೆ. ಅದು *cheo*. ಯಾಜಕಕಾಂಡ 14:15, 16ರಲ್ಲಿ ಸೆಪ್ತುವಗಿಂತದಲ್ಲಿ ಎಲ್ಲಾ ಈ ಮೂರು

ಪದಗಳಿವೆ. ಯಾಜಕನು ತನ್ನ ಕೈಯಲ್ಲಿ ಎಣ್ಣೆಯನ್ನು ಸುರಿಯ ಬೇಕಾಗಿತ್ತು. ಎಣ್ಣೆಯಲ್ಲಿ ತನ್ನ ಬಲಗೈಯನ್ನು ಅದ್ದಬೇಕಾಗಿತ್ತು. ಆ ಮೇಲೆ ಆ ಎಣ್ಣೆಯನ್ನು ಚಿಮುಕಿಸಬೇಕಾಗಿತ್ತು. ಇಲ್ಲಿ ಎರಡು ವಚನಗಳಲ್ಲಿ ಎಲ್ಲಾ ಮೂರು ಪದಗಳಿವೆ. "ಅದ್ದು" (dip) ಎಂಬುದಾಗಿ ಭಾಷಾಂತರಿಸಿದ ಪದವು "ಬ್ಯಾಪ್ಟಾಯ್ಜ" (baptize) ಎಂಬ ಪದವನ್ನು ಹೊಂದುವ ಅದೇ ಪದದ ಮೂಲರೂಪವಾಗಿದೆ. ಅದೇ ಸಂಗತಿಯು 2 ಅರಸು 5:14ರಲ್ಲಿ ಸತ್ಯ ವಾಗಿದೆ. ಇದು ನಾಮಾನನು ಮುಳುಗಿ ಎದ್ದದ್ದನ್ನು ಹೇಳುತ್ತದೆ."ಬಾಪ್ಟಾಯ್ಜ" ಪದದ ಅರ್ಥದ ಸಾಮಾನ್ಯ ತಿಳುವಳಿಕೆಯು ಅಪೊಸ್ತಲರ ಕಾಲದಲ್ಲಿ ಇತ್ತೆಂದು ತೋರುತ್ತದೆ. ಆದುದರಿಂದ ಅವರ ಅರ್ಥದ ಬಗ್ಗೆ ಸಂಬಂಧಿಸಿ ಆಗ ಯಾವುದೇ ವಾಗ್ವಾದವಿರಲಿಲ್ಲ. ಹೊಸ ಒಡಂಬಡಿಕೆಯು ಬರೆಯಲ್ಪಟ್ಟ ಗ್ರೀಕ ಭಾಷೆಯ ಬಗ್ಗೆ ಏನನ್ನು ತಿಳಿಯದ ವ್ಯಕ್ತಿಯು ತನ್ನ ಬೈಬಲನ್ನು ತೆಗೆದುಕೊಂಡು ಬಾಪ್ತಿಸ್ಮದ ಬಗ್ಗೆ ಹೇಳಿದ ವಾಕ್ಯಗಳನ್ನು ತೆಗೆದುಕೊಂಡು ಬಾಪ್ತಿಸ್ಮದ ಬಗ್ಗೆ ಕಲಿತುಕೊಳ್ಳ ಬಹುದೆಂದು ನನಗೆ ನಿಶ್ಚಯವಾಗಿದೆ.

**ಸಂದರ್ಭಗಳಿಂದ ಶಬ್ದಾರ್ಥ ನಿರೂಪಣೆ**

ವಿವಿಧ ವಾಕ್ಯಗಳನ್ನು ನಾವು ಓದುವಂತೆ, ಬಾಪ್ತಿಸ್ಮಕ್ಕಾಗಿ ಆಯ್ಕೆ ಮಾಡಿದ ಸ್ಥಳವು ಯಾವಾಗಲೂ ಒಂದು ನದಿ ಇಲ್ಲವೇ "ಬಹಳ ನೀರು" ಇದ್ದ ಸ್ಥಳವಾಗಿತ್ತು (ಮತ್ತಾಯ 3:6; ಯೋಹಾನ 3:23). ಪೌಲನು ಬಾಪ್ತಿಸ್ಮ ಹೊಂದುವ ಮೊದಲು, ಆ ಕಾರ್ಯಕ್ಕಾಗಿ ಸಿದ್ಧನಾಗಲು ಏಳಬೇಕೆಂದು ಹೇಳಲ್ಪಟ್ಟನು (ಅಪೊಸ್ತಲರ ಕೃತ್ಯ 22:16). ಐಥಿಯೋಪ್ಯದ ಕಂಚುಕಿಯ ಬಾಪ್ತಿಸ್ಮದ ವಿಷಯದಲ್ಲಿ ಪ್ರಸಂಗಿಯೂ ಬಾಪ್ತಿಸ್ಮ ಹೊಂದಲಿಕ್ಕಿರುವವನೂ ಬಾಪ್ತಿಸ್ಮಕ್ಕಾಗಿ ನೀರಿನೊಳಗೆ ಇಳಿದರು (ಅಪೊಸ್ತಲರ ಕೃತ್ಯ 8:38). ಅವರು ನೀರಿನಲ್ಲಿದ್ದಾಗ ಬಾಪ್ತಿಸ್ಮ ಮಾಡಿಸಲ್ಪಟ್ಟರು.

ಪ್ರಥಮ ಶತಮಾನದ ಪ್ರೇರೇಪಿತ ಜನರು ನಿಶ್ಚಯವಾಗಿಯೂ ವಿವೇಚನೆಯುಳ್ಳ ವರಾಗಿದ್ದರು. ಅವರ ಕಾರ್ಯಗಳು ಬುದ್ಧಿಯುಳ್ಳ ಕಾರ್ಯಗಳಾಗಿದ್ದವು. ಬಾಪ್ತಿಸ್ಮದಲ್ಲಿ ನಡಿಸ ಲ್ಪಟ್ಟ ಕಾರ್ಯವು ಚಿಮುಕಿಸುವಿಕೆ ಅಥವಾ ಸುರಿಸುವಿಕೆಯಾಗಿದ್ದರೆ, ಅವರು ವಿವೇಚನೆ ಯಿಂದ ವರ್ತಿಸುವವರಾಗಿರುತ್ತಿರಲಿಲ್ಲ. ಚಿಮುಕಿಸುವುದು ಅಥವಾ ಸುರಿಯುವುದು ನದಿಯ ಬಳಿಗೆ ಹೋಗದೇ ಅಥವಾ ನೀರಿನೊಳಗೆ ಇಳಿಯದೇ ಇರುವುದರಿಂದ ಬಹಳ ಸುಲಭವಾದದ್ದಾಗಿರುತ್ತಿತ್ತು. ಬಾಪ್ತಿಸ್ಮವು ಕೇವಲ ಚಿಮುಕಿಸುವಿಕೆಯನ್ನು ಮಾತ್ರ ಒಳ ಗೊಂಡಿದ್ದರೆ ಅಂಥ ಕೃತ್ಯಗಳಿಗೆ ಯಾವ ಕಾರಣವು ಇರುತ್ತಿರಲಿಲ್ಲ. ಅದಕ್ಕೆ ವಿರುದ್ಧವಾಗಿ ಮುಳುಗೇಳಿಸುವಿಕೆಯು ಅವೆಲ್ಲವುಗಳನ್ನು ಒಳಗೊಂಡಿರುತ್ತದೆ. "ಬಹಳ ನೀರು" ಇರುವ ಸ್ಥಳವನ್ನು ಆಯ್ದುಕೊಳ್ಳುವುದು ಪರಿಪೂರ್ಣವಾಗಿ ಸ್ವಾಭಾವಿಕವಾದದ್ದಾಗಿದೆ. ಬಾಪ್ತಿಸ್ಮವು ಮುಳುಗೇಳಿಸುವಿಕೆಯನ್ನು ಒಳಗೊಂಡಿದ್ದರೆ ಪ್ರಸಂಗಿಗೂ ಬಾಪ್ತಿಸ್ಮ ಹೊಂದುವವನಿಗೂ ಆ ನೀರಿನಲ್ಲಿ ಇಳಿಯುವುದು ಇಬ್ಬರಿಗೂ ಸ್ವಾಭಾವಿಕವಾದದ್ದಾಗಿದೆ. ಈ ಜನರು ಬುದ್ಧಿ ವಂತಿಕೆಯಿಂದ ವರ್ತಿಸಿದರು ಎಂದು ನಾವು ತಿಳಿಯಬೇಕಾಗಿದ್ದುದರಿಂದ ಮುಳುಗೇಳಿ ಸುವಿಕೆಯು ಆ ಸಮಯದಲ್ಲಿ ಸತತವಾದ ಆಚರಣೆಯಾಗಿತ್ತೆಂದು ತಾರ್ಕಿಕವಾಗಿ ನಿರ್ಣಯಿಸಬೇಕಾಗುತ್ತದೆ.

**ಸೂಚ್ಯ ಉಲ್ಲೇಖಗಳಿಂದ ನಿರೂಪಿಸಲ್ಪಟ್ಟಿದ್ದು**

ಹೊಸ ಒಡಂಬಡಿಕೆಯಲ್ಲಿ ಘಟನೆಗಳ ಸ್ವಭಾವವನ್ನು ಸೂಚಿಸುವ ಬಾಪ್ತಿಸ್ಮಕ್ಕೆ ಸಂಬಂಧಿಸಿ ಮಾಡಿದ ಕೆಲವು ಪ್ರಾಸಂಗಿಕ ಟಿಪ್ಪಣಿಗಳಿವೆ. ಬರಹಗಾರನು ಅಂಥ

ಸೂಚನೆಗಳಿಂದ ಪ್ರಾಥಮಿಕವಾಗಿ ಬಾಪ್ತಿಸ್ಮವನ್ನು ವಿವರಿಸಲು ಉದ್ದೇಶಿಸಿರಲಿಲ್ಲ. ಆದರೆ ಅದರ ಬಗ್ಗೆ ಕೆಲವು ವಾಸ್ತವವಾದವುಗಳು ಪ್ರಕಟಿಸಿದ್ದರಿಂದ ಆತನು ಅದನ್ನೇ ಮಾಡಿದನು.

ಯೋಹಾನ 3:5ರಲ್ಲಿ ನೀರಿನಲ್ಲಿ ಜನನದಂತೆ ಯೇಸುವು ಬಾಪ್ತಿಸ್ಮದ ಬಗ್ಗೆ ಮಾತಾಡಿದನು. ಜನನ ಮತ್ತು ಚಿಮುಕಿಸುವಿಕೆಯ ಮಧ್ಯದಲ್ಲಿ ಗ್ರಹಿಸಿಕೊಳ್ಳುವ ಹೋಲಿಕೆ ಯಿರುವದಿಲ್ಲ. "ಸತ್ತವರೊಳಗಿಂದ ಮೊದಲು ಎದ್ದು ಬಂದವನು" (ಕೊಲೊಸ್ಸೆ 1:18) ಎಂದು ಯೇಸುವು ಕರೆಯಲ್ಪಟ್ಟಿದ್ದರಿಂದ, ಆತನ ಪುನರುತ್ಥಾನವು ಒಂದು ಜನನಕ್ಕೆ ಹೋಲಿಸಲ್ಪಟ್ಟದ್ದರಿಂದ, ನೀರಿನ ಸಮಾಧಿಯೊಳಗಿಂದ ನಮ್ಮ ಪುನರುತ್ಥಾನವು ಅದೇ ರೀತಿಯಲ್ಲಿ ಒಂದು ಜನನವಾಗಿದೆಯೆಂದು ಹೇಳಲ್ಪಟ್ಟಿದೆ.

ಇಬ್ರಿಯರಿಗೆ ಬರೆದ ಪತ್ರಿಕೆಯ ಬರಹಗಾರನು ಶುದ್ಧ ನೀರಿನಿಂದ ದೇಹವನ್ನು ತೊಳೆಯುವದಕ್ಕೆ ಸಂಬಂಧಿಸಿ ಹೇಳಿದನು. ಇದು ಅವಶ್ಯವಾಗಿ ಬಾಪ್ತಿಸ್ಮಕ್ಕೆ ಸಂಬಂಧಿಸಿದೆ (ಇಬ್ರಿಯ 10:22). ಚಿಮುಕಿಸುವಿಕೆಯು ದೇಹದ ತೊಳೆಯುವಿಕೆಯೆಂದು ಕರೆಯಲ್ಪಡಲಾರದು. ಬಾಪ್ತಿಸ್ಮವು "ಮೈಕೊಳೆಯನ್ನು ಹೋಗಲಾಡಿಸುವಂಥದ್ದಲ್ಲ. ಒಳ್ಳೇ ಮನಸ್ಸಾಕ್ಷಿ ಬೇಕೆಂದು ದೇವರಿಗೆ ವಿಜ್ಞಾಪಿಸಿಕೊಳ್ಳುವಂಥದ್ದೇ" (1 ಪೇತ್ರ 3:21) ಆಗಿದೆಯೆಂದು ಪೇತ್ರನು ತಾನು ಬರೆಯುತ್ತಿದ್ದಂಥವರಿಗೆ ಭರವಸೆ ಕೊಟ್ಟನು. ಬಾಪ್ತಿಸ್ಮವು ದೇಹದಿಂದ ಕೊಳೆಯನ್ನು ತೆಗೆದು ಹಾಕುವ ಉದ್ದೇಶಕ್ಕಾಗಿರುವದಿಲ್ಲ ಎಂದು ಅವರನ್ನು ಎಚ್ಚರಿಸುವ ಅಗತ್ಯತೆಯನ್ನು ಪೇತ್ರನು ನೋಡಿದನು. ಅದು ಹಾಗಿರುವದೆಂಬ ವಿಚಾರದಲ್ಲಿ ಅವರು ಬಿದ್ದು ಹೋಗಬಹುದೆಂದು ಅವನು ಭಯಪಟ್ಟನು. ತಲೆಯ ಮೇಲೆ ಕೆಲವು ಹನಿ ನೀರನ್ನು ಚಿಮುಕಿಸುವದರಿಂದ ಬಾಪ್ತಿಸ್ಮವು ಮಾಡಿಸಲ್ಪಟ್ಟಿದ್ದರೆ ಈ ಎಚ್ಚರಿಕೆಯ ಅವಶ್ಯಕತೆಯಿರುತ್ತಿರಲಿಲ್ಲ. ಇವುಗಳು ಮತ್ತು ಇತರ ಸೂಚನೆಗಳು ಮುಳುಗೇಳಿಸುವಿಕೆ ಕಡೆಗೆ ನಿಶ್ಚಯವಾಗಿ ತೋರಿಸುತ್ತವೆ.

### ನೇರವಾದ ಸಾಕ್ಷಿಯಿಂದ ನಿರೂಪಿಸಲ್ಪಟ್ಟಿತು

ಬಾಪ್ತಿಸ್ಮವು ಏನಾಗಿರುವುದೆಂದು ಸರಳವಾಗಿ ಹೇಳಿದ ಕೆಲವು ಮಾತುಗಳನ್ನು ನಾವೀಗ ಯೋಚಿಸೋಣ. "... ನಾವು ಬಾಪ್ತಿಸ್ಮ ಮಾಡಿಸಿಕೊಂಡಾಗ ಆತನ ಮರಣದಲ್ಲಿ ಪಾಲುಗಾರರಾಗಿ ಆತನೊಂದಿಗೆ ಹೂಣಲ್ಪಟ್ಟೆವು" (ರೋಮಾಪುರ 6:4) ಎಂದು ಪೌಲನು ಹೇಳಿದ್ದಾನೆ. "ನೀವು ಬಾಪ್ತಿಸ್ಮದಲ್ಲಿ ಕ್ರಿಸ್ತನೊಂದಿಗೆ ಹೂಣಲ್ಪಟ್ಟದ್ದರಿಂದಲೇ ... ಆತನನ್ನು ಸತ್ತವರೊಳಗಿಂದ ಎಬ್ಬಿಸಿದ ದೇವರ ಸಾಮರ್ಥ್ಯದಲ್ಲಿ ನಂಬಿಕೆಯಿಡುವದರ ಮೂಲಕ ಅದರಲ್ಲಿ ಆತನ ಕೂಡ ಎದ್ದು ಬಂದಿರಿ" ಎಂದು ಕೊಲೊಸ್ಸೆ 2:12ರಲ್ಲಿ ಅವನು ಬರೆದನು.

ಮುಳುಗೇಳಿಸುವಿಕೆಯಲ್ಲಿ ಏನಾಗುತ್ತದೆಂಬುದರ ಹೇಳಿಕೆಯನ್ನು ರಚಿಸುವದಕ್ಕೆ ಒಬ್ಬ ವ್ಯಕ್ತಿಯು ಪ್ರಯತ್ನಿಸಿದರೆ, ನಾವು ಹೂಣಲ್ಪಟ್ಟೆವು ಮತ್ತು ಎಬ್ಬಿಸಲ್ಪಟ್ಟೆವು ಎಂದು ಹೇಳು ವದಕ್ಕಿಂತ ಹೆಚ್ಚು ಸರಳವಾದ ಮಾತುಗಳಲ್ಲಿ ಹೇಳಲಾರನು. ತನ್ನ ತಲೆಯ ಮೇಲೆ ನೀರಿನ ಕೆಲವು ಹನಿಗಳನ್ನು ಚಿಮುಕಿಸಿಕೊಂಡವನು, ಕ್ರಿಸ್ತನೊಂದಿಗೆ ಹೂಣಲ್ಪಟ್ಟು ಎಬ್ಬಿಸಲ್ಪಟ್ಟಿದ್ದಾನೆ ಎಂದು ಹೇಳಬಹುದೋ? ಅವನು ಯಥಾರ್ಥತೆಯಿಂದ ಹಾಗೆ ಹೇಳಲಾರನು.

## ಯಾರು ಬಾಪ್ತಿಸ್ಮವನ್ನು ಹೊಂದಬಹುದು?

ಯಾರು ಬಾಪ್ತಿಸ್ಮವನ್ನು ಹೊಂದಿಕೊಳ್ಳಬೇಕು? ಇದು ಬಹಳ ಮುಖ್ಯವಾದ ಪ್ರಶ್ನೆಯಾಗಿದೆ. ಸರಿಯಾದ ಉತ್ತರದ ಅವಶ್ಯಕತೆಯಿದೆ.

**ಪೂರ್ವಾಗತ್ಯ ಸಂಗತಿಗಳನ್ನು ಪುರೈಸಬೇಕು**

ಬಾಪ್ತಿಸ್ಮದ ಯೋಗ್ಯ ಕರ್ತೃವು ಯಾರು ಎಂಬುದನ್ನು ಪರಿಶುದ್ಧ ಬರಹಗಳಲ್ಲಿ ಸ್ಪಷ್ಟಪಡಿಸಿದ ಸಿದ್ಧತೆಯ ಹೆಜ್ಜೆಗಳನ್ನು ಗಮನಿಸುವದರಿಂದ ನಾವು ಕಲಿತಕೊಳ್ಳ ಬಹುದು. ತನ್ನ ಮಹಾ ನಿಯೋಗದಲ್ಲಿ ಯೇಸು ಬಾಪ್ತಿಸ್ಮದ ಅಧಿಕಾರಕೊಟ್ಟನು. ಆ ನಿಯೋಗದ ಬಗ್ಗೆ ಮತ್ತಾಯನ ದಾಖಲೆಯ ಪ್ರಕಾರ ಬೋಧನೆಯು ಬಾಪ್ತಿಸ್ಮಕ್ಕಿಂತ ಮೊದಲು ಬರುವುದು. ಮಾರ್ಕನ ದಾಖಲೆಯ ಪ್ರಕಾರ, ಮಾನಸಾಂತರವು ಪ್ರಸಂಗದ ಭಾಗವಾಗಿದೆ (ಮತ್ತಾಯ 28:19, 20; ಮಾರ್ಕ 16:15, 16; ಲೂಕ 24:46, 47). ಪಂಚಾಶತ್ತಮ ದಿನದಂದು ಪೇತ್ರನು ಬಾಪ್ತಿಸ್ಮಕ್ಕಿಂತ ಮೊದಲು ಮಾನಸಾಂತರದ ಅವಶ್ಯಕತೆಯಿದೆಯೆಂದು ಹೇಳಿದನು (ಅಪೊಸ್ತಲರ ಕೃತ್ಯ 2:38). ಆದುದರಿಂದ, ಒಬ್ಬ ವ್ಯಕ್ತಿಗೆ ಬೋಧನೆ ಮಾಡಲ್ಪಟ್ಟು ಅವನು ನಂಬಿ ಹಾಗೂ ಅವನು ತನ್ನ ಪಾಪಗಳಿಗಾಗಿ ಮನಸಾಂತರಪಡೆದಿದ್ದರೆ ಅವನು ಬಾಪ್ತಿಸ್ಮ ಹೊಂದಲಾರನು. ಮಾನಸಾಂತರಪಟ್ಟ ವಿಶ್ವಾಸಿಯು ಬಾಪ್ತಿಸ್ಮ ಹೊಂದಲು ಯೇಸುವಿನಿಂದ ಅಧಿಕಾರ ಹೊಂದಿದ ವ್ಯಕ್ತಿ ಮಾತ್ರವೇ ಆಗಿದ್ದಾನೆ. ಶಿಶುವಿಗೆ ಸುವಾರ್ತೆಯು ಬೋಧಿಸಲ್ಪಡಲಾರದು, ಶಿಶುವು ನಂಬಲಾರದು ಮತ್ತು ಮಾನಸಾಂತರಪಡಲಾರದು. ಆದುದರಿಂದ, ಶಿಶುವು ಯೇಸು ಕ್ರಿಸ್ತನ ಅಧಿಕಾರದಿಂದ ಬಾಪ್ತಿಸ್ಮ ಹೊಂದಲಾರದು. "ಶಿಶು ಬಾಪ್ತಿಸ್ಮ" ಆಚರಿಸುವುದು ಆತನ ಅಧಿಕಾರವಿಲ್ಲದೇ ಇರುವ ಕಾರ್ಯವಾಗಿದೆ, ಆತನಿಗೆ "ಎಲ್ಲಾ ಅಧಿಕಾರವಿದೆ" (ಮತ್ತಾಯ 28:18). "ಶಿಶು ಬಾಪ್ತಿಸ್ಮ" ಎಂದು ಕರೆಯಲ್ಪಡುವಂಥದ್ದು ಜಾರಿಯಲ್ಲಿ ಇರುವವರೆಗೆ ವಿಶ್ವಾಸಿಗಳ ಬಾಪ್ತಿಸ್ಮವು ಮಿತಗೊಳಿಸಲ್ಪಡುತ್ತದೆ. ಯೇಸುವು ಅಧಿಕಾರ ಕೊಟ್ಟ ಬಾಪ್ತಿಸ್ಮವು ವಿಶ್ವಾಸಿಗಳ ಬಾಪ್ತಿಸ್ಮವಾಗಿದೆಯೆಂಬುದನ್ನು ನಾವು ಜ್ಞಾಪಿಸಿ ಕೊಳ್ಳೋಣ.

**"ಶಿಶು ಬಾಪ್ತಿಸ್ಮವು" ಆಚರಿಸಲ್ಪಡಲಿಲ್ಲ**

ಅಪೊಸ್ತಲರ ಕೃತ್ಯಗಳ ಗ್ರಂಥದಲ್ಲಿ ಅಪೊಸ್ತಲರು ಮಹಾ ನಿಯೋಗವನ್ನು ಅನುಸರಿಸಿ ಅಪೊಸ್ತಲರ ಪ್ರಸಂಗಿಸುವಿಕೆಯು ದಾಖಲೆಯಿದೆ. ಅವರು ಯೇಸುವಿನ ಅಧಿಕಾರದ ಕೆಳಗೆ ಕಾರ್ಯ ಮಾಡುತ್ತಿದ್ದರು. ಮಹಾ ನಿಯೋಗದಲ್ಲಿ ಅವರ ಮೇಲೆ ಹೊರಿಸಲ್ಪಟ್ಟ ಕರ್ತವ್ಯ ಗಳನ್ನು ಕೈಗೊಳ್ಳುತ್ತಿದ್ದರು. ಅವರು ಶಿಶುಗಳಿಗೆ ಬಾಪ್ತಿಸ್ಮ ಕೊಟ್ಟರೆಂದೂ ಕೆಲವರು ಆರೋ ಪಿಸಿದ್ದಾರೆ. ಹಾಗಿದ್ದರೆ, ಅವರು ಯೇಸುವಿನ ಅಧಿಕಾರವನ್ನು ಮೀರಿಹೋದರು. ಅವರು ಶಿಶುಗಳಿಗೆ ಬಾಪ್ತಿಸ್ಮ ಮಾಡಿಸಿದ್ದರೆ, ಅಪೊಸ್ತಲರ ಕೃತ್ಯಗಳ ಗ್ರಂಥವು ಆ ಆಚರಣೆಯ ಬಗ್ಗೆ ಮೌನವಾಗಿರುತ್ತದೆ. ವಿಶ್ವಾಸಿಗಳು ಬಾಪ್ತಿಸ್ಮ ಹೊಂದಿದ್ದರ ಬಗ್ಗೆ ಹೇಳಲ್ಪಟ್ಟಿದೆ (ಅಪೊಸ್ತಲರ ಕೃತ್ಯ 2:37-41; 8:12). ಆದರೆ ಶಿಶುಗಳ ಬಾಪ್ತಿಸ್ಮದ ಬಗ್ಗೆ ಏನೂ ಹೇಳಲ್ಪಟ್ಟಿರುವದಿಲ್ಲ.

ಬೈಬಲಿನ ಅನೇಕ ಘಟನೆಗಳಿಗೆ ಸಂಬಂಧಿಸಿ ಶಿಶುಗಳ ಬಗ್ಗೆ ನಮೂದಿಸಲ್ಪಟ್ಟಿದೆ. ಪರೋಹನಿಂದ ಆಜ್ಞಾ, ಯೇಸು ಚಿಕ್ಕ ಮಕ್ಕಳನ್ನು ಆಶೀರ್ವದಿಸಿದ್ದು. ಆದರೆ ಬಾಪ್ತಿಸ್ಮಕ್ಕೆ ಸಂಬಂಧಿಸಿ ಮಕ್ಕಳ ಬಗ್ಗೆ ಬರೆಯಲ್ಪಟ್ಟಿರುವದಿಲ್ಲ. ಹಳೇ ಒಡಂಬಡಿಕೆಯಲ್ಲಿ ಶಿಶುಗಳ ಸುನ್ನತಿಯ ಬಗ್ಗೆ ದೇವರು ಆಜ್ಞಾಪಿಸಿದನು. ಈ ಆಚರಣೆಯ ಬಗ್ಗೆ ಪುನಃ ಪುನಃ ಹೇಳಲಾಗಿದೆ. ಇದಕ್ಕೆ ವ್ಯತಿರಿಕ್ತವಾಗಿ, ಹೊಸ ಒಡಂಬಡಿಕೆಯಲ್ಲಿ ಶಿಶುಗಳಿಗೆ ಬಾಪ್ತಿಸ್ಮ ಮಾಡಿಸಬೇಕೆಂದು ದೇವರಿಂದ ಯಾವುದೇ ಆಜ್ಞೆ ಇರುವದಿಲ್ಲ. ಅಂಥ ಆಚರಣೆಯನ್ನು ಕುರಿತು ಅಪೊಸ್ತಲರಿಂದ ಯಾವ ಉದಾಹರಣೆಯೂ ಇರುವದಿಲ್ಲ.

"ಶಿಶು ಬಾಪ್ತಿಸ್ಮ" ಪ್ರತಿಪಾದಿಸುವವರು ಕುಟುಂಬದಲ್ಲಿಯ ಬಾಪ್ತಿಸ್ಮದ ವಿಷಯಗಳನ್ನು ಪುರಾವೆಯಾಗಿ ಕೊಡುತ್ತಾರೆ. ಅವರು ಕೊರ್ನೇಲ್ಯನ, ಕ್ರಿಸ್ಪನ, ಫಿಲಿಪ್ಪಿಯ ಸೆರೆಮನೆ ಅಧಿಕಾರಿಯ ಮತ್ತು ಲುದ್ಯಳ ಕುಟುಂಬಗಳ ಕಡೆಗೆ ತೋರಿ

ಸುತ್ತಾರೆ. ಈ ಕುಟುಂಬಗಳಲ್ಲಿ ಶಿಶುಗಳಿದ್ದಿರಬೇಕೆಂದು ಅವರು ಹೇಳುತ್ತಾರೆ. ಆದರೆ ಇದು ಅನಾವಶ್ಯಕವಾದ ಮಾತಾಗಿರುತ್ತದೆ. ಶಿಶುಗಳಿಲ್ಲದೇ ಯಾವುದೇ ಸಂಖ್ಯೆಯಲ್ಲಿ ಕುಟುಂಬಗಳು ಅಸ್ತಿತ್ವದಲ್ಲಿರಬಹುದು. ಈ ದೃಷ್ಟಿಕೋನವನ್ನು ಹಿಡಿದುಕೊಳ್ಳಲು ಬಯಸುವವರು ತಲುಪುವ ತೀರ್ಮಾನಕ್ಕೆ ಬರಲು ಅನೇಕ ಊಹೆಗಳನ್ನು ಮಾಡ ಬೇಕಾಗುತ್ತದೆ.

ಉದಾಹರಣೆಯಾಗಿ ಲುದ್ಯಳ ವಿಷಯವನ್ನು ಯೋಚಿಸಿರಿ. "ಶಿಶು ಬಾಪ್ತಿಸ್ಮಕ್ಕಾಗಿ" ವಾದ ಮಾಡವವನು ಲುದ್ಯಳು ವಿವಾಹವಾಗಿದ್ದಳು, ಆಕೆಗೆ ಮಕ್ಕಳಿದ್ದರು, ಆ ಮಕ್ಕ ಳಲ್ಲಿ ಕೆಲವು ಶಿಶುಗಳಾಗಿದ್ದವು ಹಾಗೂ ಥುವತ್ಯೈರದಿಂದ ಫಿಲಿಪ್ಪಿಗೆ ವ್ಯಾಪಾರಕ್ಕಾಗಿ ಹೋಗುತ್ತಿದ್ದಾಗ ಮಕ್ಕಳು ಆಕೆಯೊಂದಿಗಿರುತ್ತಿದ್ದರು ಎಂದು ಊಹಿಸಬೇಕಾಗಿತ್ತದೆ. ನಿಶ್ಚಯವಾಗಿಯೂ ಯಾವುದೇ ಆಚರಣೆಯು ಅಂಥ ಊಹೆಗಳ ಸರಣಿಯ ಮೇಲೆ ಅವಲಂಭಿಸಿರಲಾರದು. ನಾವು ಹೇಳಿದ ಇತರ ಸಂಗತಿಗಳಲ್ಲಿ ಕುಟುಂಬದಲ್ಲಿ ಮಕ್ಕಳಿರುವ ಸಾಧ್ಯತೆಯನ್ನು ತಳ್ಳಿ ಹಾಕುತ್ತದೆ. ಕೊರ್ನೇಲ್ಯದ ಕುಟುಂಬವು "ದೇವರಿಗೆ ಭಯಪಡುತಿತ್ತು" (ಅಪೊಸ್ತಲರ ಕೃತ್ಯ 10:2). ಕ್ರಿಸ್ಪನ ಕುಟುಂಬವು "ನಂಬಿತು" (ಅಪೊಸ್ತಲರ ಕೃತ್ಯ 18:8) ಮತ್ತು ಫಿಲಿಪ್ಪಿಯ ಸೆರೆಮನೆಯ ಅಧಿಕಾರಿಯ ಕುಟುಂಬವು "ನಂಬಿತು" (ಅಪೊಸ್ತಲರ ಕೃತ್ಯ 16:34). ಶಿಶುಗಳು ದೇವರಿಗೆ ಭಯಪಡುವದಿಲ್ಲ ಹಾಗೂ ಅವು ನಂಬುವದಿಲ್ಲ. ಆದುದರಿಂದ ಅವು ಆ ಕುಟುಂಬಗಳಲ್ಲಿ ಒಳಗೊಂಡಿರಲಿಕ್ಕಿಲ್ಲ.

### "ಶಿಶು ಬಾಪ್ತಿಸ್ಮವು" ತರ್ಕಬದ್ಧವಾಗಿರುವದಿಲ್ಲ

ಶಿಶುವು ಪಾಪವಿಲ್ಲದ್ದಾಗಿರುವದಿಲ್ಲವೆಂದು ಯೇಸು ಬೋಧಿಸಿದನು (ಮತ್ತಾಯ 18:3). ಮಾರ್ಪಡುವಿಕಯಲ್ಲಿ ನಾವು "ಚಿಕ್ಕಮಕ್ಕಳಂತೆ" ಆಗಬೇಕೆಂದು ಆತನು ಬೋಧಿಸಿದನು. ಬಾಪ್ತಿಸ್ಮದ ಉದ್ದೇಶವು ಪಾಪಗಳ ಕ್ಷಮಾಪಣೆಯಾಗಿರುವದರಿಂದ (ಅಪೊಸ್ತಲರ ಕೃತ್ಯ 2:38), ಪರಿಶುದ್ಧ ಬರಹಗಳ ಪ್ರಕಾರವಾಗಿ ಶಿಶುವಿಗೆ ಬಾಪ್ತಿಸ್ಮ ಕೊಡುವುದು ಅಸಾಧ್ಯವಾದದ್ದಾಗುತ್ತದೆ. ತೆರ್ತುಲ್ಲಿಯನಂಥ ಮೊದಲಿನ ಬರಹಗಾರರು ಶಿಶುಗಳು ಪಾಪವಿಲ್ಲದವುಗಳು ಎಂದು ವಾದಿಸಿದರೂ ಶಿಶುಗಳು ಮೂಲ ಪಾಪದ ಅಪರಾಧಿಗಳಾಗಿವೆ ಎಂದು ಅನೇಕ ವರ್ಷಗಳಿಂದ "ಶಿಶು ಬಾಪ್ತಿಸ್ಮದ" ಆಚರಣೆಯು ಪ್ರತಿಪಾದಿಸಲ್ಪಡುತ್ತದೆ. ಸಭೆಯ ಮೊದಲಿನ ಎರಡು ಶತಮಾನಗಳಲ್ಲಿ ಈ ಆಚರಣೆಯು ಬೇಕೆಂದು ಹೇಳಲ್ಪಡಲಿಲ್ಲ, ಇಲ್ಲವೇ ನಮೂದಿಸಲ್ಪಟ್ಟಿರುವದಿಲ್ಲ. ಇದಲ್ಲದೆ, ಹೊಸ ಒಡಂಬಡಿಕೆಯ ಬೋಧನೆಯು ಶಿಶುಗಳ ಬಾಪ್ತಿಸ್ಮವು ಸ್ವೀಕರಿಸಲ್ಪಟ್ಟದ್ದರ ಸಾಧ್ಯತೆಯನ್ನು ಹೊರಗಿಡುತ್ತದೆ.

ಪೆಡೋಬ್ಯಾಪ್ಟಿಸ್ಟರು (ಶಿಶುಗಳಿಗೆ ಬಾಪ್ತಿಸ್ಮ ಮಾಡಿಸುವವರು) ಸಾಮಾನ್ಯವಾಗಿ ಶಿಶುಗಳ ಬಾಪ್ತಿಸ್ಮ ಮಾಡಿಸುವದಕ್ಕಾಗಿ ಮೂಲ ಪಾಪದ ಭಾವನೆಯು ಕಾರಣವಾಗಿದೆಯೆಂಬ ವಿಚಾರವನ್ನು ಸಾಮಾನ್ಯವಾಗಿ ಬಿಟ್ಟು ಬಿಟ್ಟಿದ್ದಾರೆ. ಹೀಗೆ "ಶಿಶು ಬಾಪ್ತಿಸ್ಮದ" ಆಚರಣೆಯು ಅರ್ಥವಿಲ್ಲದೇ ಇಲ್ಲವೇ ತರ್ಕವಿಲ್ಲದೇ ನಿಂತಿರುತ್ತದೆ. ಬಾಪ್ತಿಸ್ಮವು ದೇವರಿಗೆ ವಿಧೇಯತೆಯ ಗಂಭೀರವಾದ ಕೃತ್ಯವಾಗಿದೆ.

## ಬಾಪ್ತಿಸ್ಮವು ಅಗತ್ಯವೋ?

"ತಂದೆಯ, ಕುಮಾರನ, ಪರಿಶುದ್ಧಾತ್ಮನ ಹೆಸರಿನಲ್ಲಿ" ಬಾಪ್ತಿಸ್ಮ ಮಾಡಿಸಿರಿ ಎಂದು ಯೇಸು ತನ್ನ ಶಿಷ್ಯರಿಗೆ ಹೇಳಿದನು (ಮತ್ತಾಯ 28:19). ನಿಶ್ಚಯವಾಗಿಯೂ ದೈವತ್ವದ

ಮೂವರು ಸದಸ್ಯರ ಹೆಸರುಗಳಲ್ಲಿ ಮಾಡುವ ಕಾರ್ಯಕ್ಕೆ ಮುಖ್ಯವಾದ ಉದ್ದೇಶವಿರಬೇಕು. ಬಾಪ್ತಿಸ್ಮದ ಉದ್ದೇಶವು ಯಾವುದು? ಅದು ಯಾವುದಕ್ಕಾಗಿರುವುದು? ಅದು ಕೇವಲ ಐಚ್ಛಿಕ ಸಾಂಪ್ರದಾಯವಾಗಿದೆಯೆಂದು ಅನೇಕರು ಒತ್ತಿಹೇಳುತ್ತಾರೆ. ಅದಕ್ಕೆ ವ್ಯತಿರಿಕ್ತವಾಗಿ, ಸರಿಯಾದ ಯೋಗ್ಯತೆಯುಳ್ಳ ಬಾಪ್ತಿಸ್ಮವಿಲ್ಲದೇ ಒಬ್ಬನು ಕ್ರೈಸ್ತನಾಗಲಾರನು ಎಂಬ ಸ್ವಭಾವವುಳ್ಳದ್ದಾಗಿದೆ.

**ಅದು ರಕ್ಷಣೆಯ ಒಂದು ಶರತ್ತಾಗಿದೆ**

ಯೇಸು ಬಾಪ್ತಿಸ್ಮವನ್ನು ರಕ್ಷಣೆಯ ಶರತ್ತನ್ನಾಗಿ ಹೇಳಿದ್ದರಿಂದ ಕ್ರೈಸ್ತನಾಗಲು ಬಾಪ್ತಿಸ್ಮವು ಅಗತ್ಯವಾದದ್ದಾಗಿದೆ (ಮಾರ್ಕ 16:16). ಬಾಪ್ತಿಸ್ಮವು ರಕ್ಷಣೆಗಿಂತ ಮೊದಲು ಇಡಲ್ಪಟ್ಟಿದೆ. ಅದು ನಂಬಿಕೆಯೊಂದಿಗೆ ಸಂಬಂಧಿಸಿದೆ. ರಕ್ಷಣೆಯು ನಂಬಿಕೆಯನ್ನೂ ಬಾಪ್ತಿಸ್ಮವನ್ನೂ ಹಿಂಬಾಲಿಸುತ್ತದೆ. ಬಾಪ್ತಿಸ್ಮವು ಮಾತ್ರವೇ ಒಂದೇ ಶರತ್ತಾಗಿರವುದಿಲ್ಲ. ಅದು ಮಾತ್ರವೇ ಅತೀ ಮುಖ್ಯವಾದ ಶರತ್ತಾಗಿರುವದಿಲ್ಲ; ಆದರೆ ಅದು ರಕ್ಷಣೆಯ ಯೋಜನೆಯಲ್ಲಿಯ ಶರತ್ತುಗಳಲ್ಲಿ ಒಂದಾಗಿದೆ. ಭೂಮಿ ಆಕಾಶವು ದಾಟಿ ಹೋಗುವವು ಆದರೆ ಯೇಸುವಿನ ಮಾತುಗಳು ಸೋತು ಹೋಗುವದಿಲ್ಲ. ಯೇಸುವಿನ ಸ್ವಂತ ಮಾತುಗಳನ್ನು ಯೋಚಿಸಿದ ನಂತರ, "ನಂಬುವವನು ಮತ್ತು ಬಾಪ್ತಿಸ್ಮ ಹೊಂದುವದನ್ನು ತಿರಸ್ಕರಿಸುವವನು ರಕ್ಷಿಸಲ್ಪಡುವನೋ"? ಎಂದು ಹೇಳಲು ಯಾರು ಧೈರ್ಯ ಮಾಡುವರು? "ನಂಬಿದವನು ಮತ್ತು ಬಾಪ್ತಿಸ್ಮ ಹೊಂದಿದವನು ರಕ್ಷಿಸಲ್ಪಡುವನು" ಎಂದು ಯೇಸು ಹೇಳಿದನು.

**ಅದು ಪಾಪಗಳ ಕ್ಷಮಾಪಣೆಗಾಗಿ ಇರುವುದು**

ಕ್ರೈಸ್ತನಾಗಲು ಬಾಪ್ತಿಸ್ಮ ಹೊಂದುವುದು ಅಗತ್ಯವಾಗಿದೆ ಯಾಕೆಂದರೆ ಬಾಪ್ತಿಸ್ಮವು ಪಾಪಗಳ ಕ್ಷಮಾಪಣೆಗಾಗಿರುವದೆಂದು ಹೊಸ ಒಡಂಬಡಿಕೆಯು ಬೋಧಿಸುತ್ತದೆ (ಅಪೊಸ್ತಲರ ಕೃತ್ಯ 2:38). ತನಗೆ ಮಾತಾಡಲು ಪರಿಶುದ್ಧಾತ್ಮನು ನಡಿಸಿದಂತೆ ಮಾತಾಡಿದ, ಪ್ರೇರಿತನಾದ ಸಿಮೋನ ಪೇತ್ರನಿಂದ ಈ ಹೇಳಿಕೆಯು ಕೊಡಲ್ಪಟ್ಟಿತು. "ನಾವೇನು ಮಾಡಬೇಕು?" ಎಂಬ ಪ್ರಶ್ನೆಗೆ ಉತ್ತರಿಸುವಲ್ಲಿ ಇದು ಹೇಳಲ್ಪಟ್ಟಿದೆ. ದೇವರ ಸುವಾರ್ತೆಯ ಸಂದೇಶದಿಂದ ಪ್ರವೀಣ ಪ್ರಸಂಗಿಸುವಿಕೆಯೊಂದಿಗೆ ಮೂರು ಸಾವಿರ ಜನರಿಗೆ ಪೇತ್ರನು ದೃಢಪಡಿಸಿದನು ಮತ್ತು ಅವರಲ್ಲಿ ಅರುಹನ್ನು ಹುಟ್ಟಿಸಿದನು. ವಿಶ್ವಾಸಿಗಳ ಗುಂಪಿಗೆ "ಮಾನಸಾಂತರಪಡಿರಿ ಹಾಗೂ ನಿಮ್ಮ ಪಾಪಗಳ ಕ್ಷಮಾಪಣೆಗಾಗಿ ಯೇಸು ಕ್ರಿಸ್ತನ ಹೆಸರಿನಲ್ಲಿ ಬಾಪ್ತಿಸ್ಮ ಮಾಡಿಸಿಕೊಳ್ಳಿರಿ" ಎಂದು ಅವನು ಹೇಳಿದನು.

ಮಾನಸಾಂತರ ಮತ್ತು ಬಾಪ್ತಿಸ್ಮವು ಈ ವಾಕ್ಯದಲ್ಲಿ ಸಂಬಂಧಿಸಲ್ಪಟ್ಟಿದೆ. ಒಂದಾಗಿ ಅವು ಪಾಪಗಳ ಪರಿಹಾರಕ್ಕಾಗಿವೆಯೆಂದು ಹೇಳಲ್ಪಟ್ಟಿದೆ. ಮಾನಸಾಂತರವು ಯಾವುದಕ್ಕಾಗಿರವುದೋ ಬಾಪ್ತಿಸ್ಮವೂ ಸಹ ಅದಕ್ಕಾಗಿರುವುದು. ಕೆಲವರು ವಾದಿಸಿದಂತೆ, ಪಾಪಗಳ ಪರಿಹಾರದ "ಕಾರಣದಿಂದ" ಅಪೊಸ್ತಲರ ಕೃತ್ಯಗಳಲ್ಲಿಯ ಮಾರ್ಪಾಟಾದವರು ಬಾಪ್ತಿಸ್ಮ ಹೊಂದಬೇಕಾಗಿದ್ದರೆ, ಆಗ ಅವರು ಪಾಪ ಪರಿಹಾರದ ಕಾರಣದಿಂದ ಮಾನಸಾಂತರ ಪಡಬೇಕಾಗಿದ್ದರೆ, ಅದು ಅರ್ಥಹೀನವಾದದ್ದಾಗುತ್ತದೆ. ಪಾಪಗಳ ಪರಿಹಾರವು ಮಾನಸಾಂತರದ ನಂತರ ಬರುವದಾದರೆ ಅದು ಬಾಪ್ತಿಸ್ಮದ ನಂತರವೂ ಸಹ ಬರುವುದು. ಮತ್ತಾಯ 26:28ರಲ್ಲಿ ಹೆಚ್ಚು ಕಡಿಮೆ ಅದೇ ರೀತಿಯ, "ಪಾಪಗಳ ಕ್ಷಮಾಪಣೆಗಾಗಿ" ಎಂಬ ಹೇಳಿಕೆಯಿರುತ್ತದೆ. ಪಾಪಗಳ ವಿಮೋಚನೆಗಾಗಿ ಕ್ರಿಸ್ತನ ರಕ್ತವು

ಸುರಿಸಲ್ಪಟ್ಟಿತು. ನಿಶ್ಚಯವಾಗಿಯೂ ಪಾಪಗಳು ಆಗಲೇ ಕ್ಷಮಿಸಲ್ಪಟ್ಟದ್ದರಿಂದ ಕ್ರಿಸ್ತನು ತನ್ನ ರಕ್ತವನ್ನು ಸುರಿಸಿದನೆಂದ ಯಾರೂ ವಾದಿಸುವದಿಲ್ಲ. ನಮಗಾಗಿ ಪಾಪಗಳ ವಿಮೋಚನೆಯನ್ನು ಹೊಂದಿಕೊಳ್ಳುವದಕ್ಕಾಗಿ ಆತನು ತನ್ನ ರಕ್ತವನ್ನು ಸುರಿಸಿದನು. ಆ ವಿಮೋಚನೆಯನ್ನು ಹೊಂದಿಕೊಳ್ಳಲು ಪಾಪಿಗಳು ಬಾಪ್ತಿಸ್ಮ ಮಾಡಿಸಿಕೊಳ್ಳಬೇಕು.

**ಅದು ನಮ್ಮನ್ನು ರಕ್ಷಿಸುತ್ತದೆ**

ಬಾಪ್ತಿಸ್ಮವು ಈಗ ನಮ್ಮನ್ನು ರಕ್ಷಿಸುವುದು ಎಂದು ಹೊಸ ಒಡಂಬಡಿಕೆಯು ಬೋಧಿಸುವ ಕಾರಣದಿಂದ ಬಾಪ್ತಿಸ್ಮ ಮಾಡಿಸಿಕೊಳ್ಳುವುದು ಅಗತ್ಯವಾಗಿದೆ (1 ಪೇತ್ರ 3:21). ಪೇತ್ರನ ಮಾತುಗಳನ್ನು ಪುನಃ ಯೋಚಿಸೋಣ. ಬಾಪ್ತಿಸ್ಮವು ನಮ್ಮನ್ನು ರಕ್ಷಿಸುವುದು. ಆದರೆ, ಯೇಸುವು ನಮ್ಮನ್ನು ರಕ್ಷಿಸುವ ಅರ್ಥದಲ್ಲಿ ಅದು ನಮ್ಮನ್ನು ರಕ್ಷಿಸುವದಿಲ್ಲ; ಬಾಪ್ತಿಸ್ಮವು ನಮ್ಮ ರಕ್ಷಕನಾಗಿರುವದಿಲ್ಲ. ಹೀಗಿದ್ದರೂ ಅದು ರಕ್ಷಣೆಗೆ ಸಂಬಂಧಿಸಲ್ಪಟ್ಟ ವಿಷಯಗಳಲ್ಲಿ ಒಂದಾಗಿರುವದರಿಂದ ಅದು ರಕ್ಷಿಸುತ್ತದೆ ಎಂದು ಹೇಳಲ್ಪಟ್ಟಿದೆ. ರಕ್ಷಣೆಯನ್ನು ಅನುಭವಿಸುವದಕ್ಕಾಗಿ ಮನುಷ್ಯನು ಒಪ್ಪಿಕೊಳ್ಳತಕ್ಕ ಯೇಸುವು ಹೆಸರಿಸಿದ ಶರತ್ತುಗಳಲ್ಲಿ ಒಂದಾಗಿದೆ. ಬಾಪ್ತಿಸ್ಮವು ರಕ್ಷಿಸಲಾರದು ಎಂದು ನಿರ್ಣಯಿಸುವ ರೀತಿಯಲ್ಲಿ ಅನೇಕರು ಈ ವಾಕ್ಯವನ್ನು ವಿವರಿಸಲು ಪ್ರಯತ್ನಿಸಿದ್ದಾರೆ, ಆದರೆ ಅದು ರಕ್ಷಿಸುತ್ತದೆಂದು ಪೇತ್ರನು ಹೇಳಿ ದ್ದಾನೆ. ಬಾಪ್ತಿಸ್ಮವು ರಕ್ಷಿಸುವದಿಲ್ಲ ಎಂಬ ನಿರ್ಣಯಕ್ಕೆ ತಲುಪುವದಕ್ಕಾಗಿ ಪೇತ್ರನ ಮಾತು ಗಳನ್ನು ಯಾವನಾದರೂ "ವಿವರಿಸುವಾಗ" ಅವನ "ವಿವರಣೆಯು" ಹೇಳಿಕೆಯ ನೇರವಾದ ಅಲ್ಲಗಳೆಯುವಿಕೆ ಯಾಗುತ್ತದೆ.

**ಅದು ನಮ್ಮನ್ನು ಕ್ರಿಸ್ತನಲ್ಲಿ ಇಡುತ್ತದೆ**

ಬಾಪ್ತಿಸ್ಮವು ನಮ್ಮನ್ನು ಕ್ರಿಸ್ತನಲ್ಲಿ ಇಡುವದೆಂದು ಹೊಸ ಒಡಂಬಡಿಕೆಯು ಬೋಧಿಸು ವದರಿಂದ ಕ್ರೈಸ್ತನಾಗಲು ಬಾಪ್ತಿಸ್ಮವು ಅಗತ್ಯತೆಯುಳ್ಳದ್ದಾಗಿದೆ (ರೋಮಾಪುರ 6:3, 4). ಕ್ರಿಸ್ತನಲ್ಲಿ ನಾವು ಬಾಪ್ತಿಸ್ಮ ಹೊಂದುವಾಗ, ಕ್ರಿಸ್ತನೊಂದಿಗೆ ನಮ್ಮನ್ನು ಧರಿಸಿಕೊಳ್ಳು ತ್ತೇವೆ (ಗಲಾತ್ಯ 3:27) ಮತ್ತು ಕ್ರಿಸ್ತನಲ್ಲಿ ನೂತನ ಜೀವಿಗಳಾಗುತ್ತೇವೆ (2 ಕೊರಿಂಥ 5:17). ವಿಮೋಚನೆಯು ಕ್ರಿಸ್ತನಲ್ಲಿರುವುದು (ಎಫೆಸ 1:7). ನಿತ್ಯ ಜೀವವು ಕ್ರಿಸ್ತನಲ್ಲಿರುವುದು (1 ಯೋಹಾನ 5:11). ಎಲ್ಲಾ ಆತ್ಮಿಕ ಆಶೀರ್ವಾದಗಳು ಕ್ರಿಸ್ತನಲ್ಲಿರುವುವು (ಎಫೆಸ 1:3). ಲೋಕವು ಕೆಡುಕನ ಬಲದೊಳಗೆ ಇರುವಾಗ (1 ಯೋಹಾನ 5:19), ಕ್ರೈಸ್ತನು ಕ್ರಿಸ್ತನಲ್ಲಿರುವನು. ಬಾಪ್ತಿಸ್ಮವು ಒಬ್ಬನನ್ನು ಕ್ರಿಸ್ತನೊಳಗೆ ಇಡುತ್ತದೆ.

**ಅದು ಪಾಪಗಳನ್ನು ತೊಳೆದು ಹಾಕುತ್ತದೆ**

ಪಾಪಗಳನ್ನು ತೆಗೆದು ಹಾಕುವದರೊಂದಿಗೆ ಬಾಪ್ತಿಸ್ಮವು ಸಂಬಂಧಿಸಿದೆಯೆಂದು ಹೊಸ ಒಡಂಬಡಿಕೆಯು ಬೋಧಿಸುವ ಕಾರಣದಿಂದ ಕ್ರೈಸ್ತರಾಗಲು ಬಾಪ್ತಿಸ್ಮ ಹೊಂದುವ ಅವಶ್ಯಕತೆಯಿದೆ (ಅಪೊಸ್ತಲರ ಕೃತ್ಯ 22:16). ಇತರ ಪರಿಶುದ್ಧ ಬರಹಗಳು ಈ ತೊಳೆ ಯುವಿಕೆಯನ್ನು ನಮೂದಿಸುತ್ತದೆ (ಎಫೆಸ 5:26; ಇಬ್ರಿಯ 10:22; ತೀತ 3:5). "ಬಾಪ್ತಿಸ್ಮ ಮಾಡಿಸಿಕೋ ಮತ್ತು ನಿನ್ನ ಪಾಪಗಳನ್ನು ತೊಳೆದುಕೋ ... " (ಅಪೊಸ್ತಲರ ಕೃತ್ಯ 22:16) ಎಂದು ಸೌಲನಿಗೆ ಹೇಳಲ್ಪಟ್ಟಿತು. ದಮಸ್ಕದ ದಾರಿಯಲ್ಲಿ ಅವನು "ಮಾಡತಕ್ಕದ್ದು" ದಮಸ್ಕದಲ್ಲಿ ಹೇಳಲ್ಪಡುವದೆಂದು ಕರ್ತನು ಸೌಲನಿಗೆ ಹೇಳಿದನು (ಅಪೊಸ್ತಲರ ಕೃತ್ಯ 9:6). ಅವನು ಬಾಪ್ತಿಸ್ಮ ಮಾಡಿಸಿಕೊಂಡು ತನ್ನ ಪಾಪಗಳನ್ನು ತೊಳೆದು ಕೊಳ್ಳಬೇಕೆಂದು ಹೇಳಲ್ಪಟ್ಟನು.

ನೀರು ಪಾಪಗಳನ್ನು ತೊಳೆಯುವದೆಂಬುದನ್ನು ನಾವು ನಂಬಲಿಕ್ಕಾಗುವದಿಲ್ಲ ವೆಂದು ಹೇಳುವದರಿಂದ ಪಾಪಗಳನ್ನು ತೊಳೆಯುವದರೊಂದಿಗೆ ಬಾಪ್ತಿಸ್ಮವನ್ನು ಸಂಬಂಧಿಸುವದನ್ನು ಅನೇಕರು ಆಕ್ಷೇಪಿಸುತ್ತಾರೆ. ನೀರಿನಿಂದ ಪಾಪಗಳು ತೊಳೆ ಯಲ್ಪಡುವದೆಂದು ಅಪೊಸ್ತಲರ ಕೃತ್ಯ 22:16 ಹೇಳುವದಿಲ್ಲ. ಯಾವುದು ಪಾಪಗಳನ್ನು ತೊಳೆಯುವುದು ಎಂದೂ ಅದು ಹೇಳುವದಿಲ್ಲ. ಅವರು ತೊಳೆಯಲ್ಪಟ್ಟಾಗ ಎಂದು ಮಾತ್ರ ಅದು ಹೇಳುತ್ತದೆ. ಯೇಸು ಕ್ರಿಸ್ತನ ರಕ್ತದಿಂದ ನಾವು ನಮ್ಮ ಪಾಪಗಳಿಂದ ತೊಳಯಲ್ಪಟ್ಟಿದ್ದೇವೆಂದು ಯೋಹನನು ಹೇಳಿದ್ದಾನೆ (ಪ್ರಕಟನೆ 1:5). ಈ ವಾಕ್ಯವು ಯಾವುದು ಪಾಪವನ್ನು ತೊಳೆಯುತ್ತದೆ ಎಂದು ಹೇಳುತ್ತದೆ. ಆದರೆ ಯಾವಾಗ ಎಂದು ಹೇಳುವದಿಲ್ಲ. ಅಪೊಸ್ತಲರ ಕೃತ್ಯ 22:16 ಮತ್ತು ಪ್ರಕಟನೆ 1:5ದನ್ನು ಒಂದಾಗಿ ಡುವಾಗ, ಯಾವುದು (ಕ್ರಿಸ್ತನ ರಕ್ತ) ಮತ್ತು ಯಾವಾಗ (ಬಾಪ್ತಿಸ್ಮದ ಸಮಯದಲ್ಲಿ) ಎಂಬುದು ನಮಗೆ ತಿಳಿಯುತ್ತದೆ. ಹೀಗಿದ್ದರೂ ರಕ್ತವು ಅಕ್ಷರಶಃವಾಗಿ ಪಾಪಗಳನ್ನು ತೊಳೆಯುವದಿಲ್ಲ ಮತ್ತು ಅಕ್ಷರಶಃ ರೀತಿಯಲ್ಲಿ ಯೇಸುವಿನ ರಕ್ತವನ್ನು ನಿಶ್ಚಿತವಾಗಿ ಸಂಪರ್ಕಿಸಲಾರೆವು. ಅದನ್ನು ನಾವು ಆತ್ಮೀಕವಾಗಿ, ಆ ಉದ್ದೇಶಕ್ಕಾಗಿ ದೇವರು ನೇಮಿಸಿದ ಸಾಧನಗಳ ಮುಖಾಂತರ ನಾವು ಅದನ್ನು ಸಮೀಪಿಸತಕ್ಕದ್ದು.

**ಕೃಪೆಯಿಂದ ರಕ್ಷಿಸಲ್ಪಡುವದಕ್ಕೆ ಅದು ನಮ್ಮನ್ನು ಶಕ್ತರನ್ನಾಗಿ ಮಾಡುತ್ತದೆ**

ನಾವು ಕೃಪೆಯಿಂದ ರಕ್ಷಿಸಲ್ಪಟ್ಟಿದ್ದೇವೆಂದು ಹೊಸ ಒಡಂಬಡಿಕೆಯು ಬೋಧಿಸು ವದರಿಂದ ಕ್ರೈಸ್ತನಾಗಲು ಬಾಪ್ತಿಸ್ಮ ಹೊಂದುವುದು ಅಗತ್ಯವಾಗಿದೆ (ಎಫೆಸ 2:5, 8, 9; ತೀತ 2:11). ಕೃಪೆಯು ಒದಗಿಸಿದ ನಿಯಮಗಳನ್ನು ಕೈಕೊಳ್ಳುವವರೆಗೆ ಯಾವುದೇ ವ್ಯಕ್ತಿಯು ಕೃಪೆಯಿಂದ ರಕ್ಷಿಸಲ್ಪಡುವದಿಲ್ಲ. "ನೋಹನು ಕರ್ತನ ದೃಷ್ಟಿಯಲ್ಲಿ ದಯೆ ಹೊಂದಿದನು" (ಆದಿಕಾಂಡ 6:8). ದೇವರ ಆಜ್ಞೆಗಳಿಗೆ ತನ್ನ ವಿಧೇಯತೆಯ ಕಾರಣ ನೋಹನು ಆ ಕೃಪೆಯಿಂದ ಲಾಭ ಹೊಂದಿದನು. ದೇವರು ಯೆಹೋಶುವನ ಕೈಗಳಲ್ಲಿ ಯೆರಿಕೋ ಪಟ್ಟಣವನ್ನು ಕೊಟ್ಟನು (ಯೆಹೋಶುವ 6:2). ಆದರೆ ದೇವರು ಹೇಳಿದ ಶರತ್ತುಗಳನ್ನು ಪೂರೈಸುವವರೆಗೆ ಈ ವರವನ್ನು ಯೆಹೋಶುವನು ಹೊಂದಿಕೊಳ್ಳಲಿಲ್ಲ. ನಮ್ಮ ಅನುದಿನದ ಆಹಾರವು ಕೃಪೆಯ ಸಂಗತಿಯಾಗಿದೆ. ಅದು ದೇವರ ವರವಾಗಿದೆ. ಆದಾಗ್ಯು ನಿಸರ್ಗದ ನಿಯಮಗಳನ್ನು ಕೈಕೊಳ್ಳುವವರೆಗೆ ನಾವು ನಮ್ಮ ಅನುದಿನದ ಆಹಾರವನ್ನು ಪಡೆದು ಕೊಳ್ಳುವದಿಲ್ಲ. ಹೀಗೆಯೇ ನಮ್ಮ ರಕ್ಷಣೆಯೊಂದಿಗಿರುವುದು. ನಾವು ಕೃಪೆಯಿಂದ ರಕ್ಷಿಸಲ್ಪಟ್ಟಿದ್ದೇವೆ, ಆದರೆ ಅವಿಧೇಯರನ್ನು ಕೃಪೆಯು ರಕ್ಷಿಸುವದಿಲ್ಲ. ರಕ್ಷಣೆಗೆ ಒಂದು ಶರತ್ತನ್ನಾಗಿ ಬಾಪ್ತಿಸ್ಮವನ್ನು ಯೇಸುವು ಆಜ್ಞಾಪಿಸಿದ್ದರಿಂದ ದೇವರ ಕೃಪೆಯಿಂದ ರಕ್ಷಿಸುವದಕ್ಕಾಗಿ ನಾವು ಬಾಪ್ತಿಸ್ಮ ಹೊಂದಬೇಕೆಂಬುದು ಹಿಂಬಾಲಿಸುತ್ತದೆ.

**ನಂಬಿಕೆಯಿಂದ ರಕ್ಷಿಸುವದಕ್ಕೆ ಅದು ನಮ್ಮನ್ನು ಬಿಡುತ್ತದೆ**

ಅಂತಿಮವಾಗಿ, ನಾವು ನಂಬಿಕೆಯಿಂದ ರಕ್ಷಿಸಲ್ಪಟ್ಟಿದ್ದೇವೆಂದು ಹೊಸ ಒಡಂಬಡಿಕೆಯು ಬೋಧಿಸುವದರಿಂದ ಕ್ರೈಸ್ತನಾಗಲು ಬಾಪ್ತಿಸ್ಮ ಹೊಂದುವುದು ಅಗತ್ಯ ವಾಗಿದೆ. ಹೊಂದಿಕೊಳ್ಳುವ ನಂಬಿಕೆಯು ಕಾರ್ಯ ಮಾಡುವ ನಂಬಿಕೆಯಾಗಿದೆ (ಗಲಾತ್ಯ 5:6). ಸತ್ತ ನಂಬಿಕೆಯಿಂದ ನಾವು ರಕ್ಷಿಸಲ್ಪಟ್ಟಿರುವದಿಲ್ಲ; ಅದು ಕಾರ್ಯಗಳಿಲ್ಲದ ನಂಬಿಕೆಯಾಗಿದೆ (ಯಾಕೋಬ 2:26). ನಂಬಿಕೆಯು ಕಾರ್ಯಗಳಿಂದ ಪರಿಪೂರ್ಣ ಮಾಡಲ್ಪಟ್ಟಿದೆ (ಯಾಕೋಬ 2:22). ಮಾರ್ಕ 16:16ರ ಪ್ರಕಾರ ಬಾಪ್ತಿಸ್ಮವು

ನಂಬಿಕೆಯೊಂದಿಗೆ ಸಂಬಂಧಿಸಿದ ವಿಧೇಯತೆಯ ಕಾರ್ಯವಾಗಿದೆ. "ನಂಬಿದವನು ಮತ್ತು ಬಾಪ್ತಿಸ್ಮ ಹೊಂದಿದವನು ರಕ್ಷಿಸಲ್ಪಡುವನು; ಆದರೆ ನಂಬದಿರುವವನು ದಂಡಿಸಲ್ಪಡುವನು" ಇದು ಸತ್ಯವಾಗಿರುವದರಿಂದ, ರಕ್ಷಿಸುವ ನಂಬಿಕೆಯು ಒಬ್ಬ ವ್ಯಕ್ತಿಯನ್ನು ಬಾಪ್ತಿಸ್ಮ ಹೊಂದಲು ನಡಿಸುವಷ್ಟು ಬಲವಾಗಿರುವ ನಂಬಿಕೆಯಾಗಿದೆ. ವಿಶ್ವಾಸವು ವಿಧೇಯವಾಗುವಾಗ ರಕ್ಷಿಸುತ್ತದೆ.

## ಮುಕ್ತಾಯ

"ಬಾಪ್ತಿಸ್ಮ ಮಾಡಿಸು" ಎಂಬ ಪದದ ಅರ್ಥದಿಂದ ಮತ್ತು ಹೊಸ ಒಡಂಬಡಿಕೆಯಲ್ಲಿ ನಾವು ಕಂಡುಕೊಳ್ಳುವ ಉದಾಹರಣೆಗಳಿಂದಲೂ ಹೇಳಿಕೆಗಳಿಂದಲೂ ಹಲವಾರು ನಿರ್ಣಯಗಳಿಗೆ ತಲುಪುತ್ತೇವೆ. ಬಾಪ್ತಿಸ್ಮದ ವಿವರಣೆಯು ಹೂಣಿಡುವಿಕೆಯೆಂದು, ಮುಳುಗೇಳಿಸುವಿಕೆಯೆಂದು ಪೌಲನ ಬರಹಗಳಲ್ಲಿಯ ವಿವಿಧ ಸೂಚನೆಗಳೊಂದಿಗೆ ಸಂಪೂರ್ಣವಾಗಿ ಒಪ್ಪಿಕೊಳ್ಳುತ್ತದೆ. ತಮ್ಮ ಪಾಪಗಳ ಕ್ಷಮಾಪಣೆ ಹೊಂದುವಂತೆ ಮತ್ತು ದೇವರ ಕೃಪೆಯಿಂದ ರಕ್ಷಿಸಲ್ಪಡುವಂತೆ ಪಶ್ಚಾತ್ತಾಪಪಟ್ಟ ವಿಶ್ವಾಸಿಗಳಿಗೆ ಮಾತ್ರವೇ ಈ ಬಾಪ್ತಿಸ್ಮವು ಮಾಡಿಸಲ್ಪಟ್ಟಿತೆಂಬುದನ್ನು ಕಂಡುಕೊಳ್ಳುತ್ತೇವೆ.

ಬಾಪ್ತಿಸ್ಮವು ನಮ್ಮನ್ನು ರಕ್ಷಿಸುತ್ತದೆ ಮತ್ತು ನಮ್ಮನ್ನು ಕ್ರಿಸ್ತನಲ್ಲಿ ಇಡುತ್ತದೆ ಎಂಬುದನ್ನು ನಾವು ನೋಡಿದ್ದೇವೆ. ನಮ್ಮ ನಂಬಿಕೆಯ ಪ್ರಕಟಣೆಯಂತೆ ಬಾಪ್ತಿಸ್ಮವು ದೇವರ ಕೃಪೆಯ ಕಾರ್ಯವಾಗಿದೆ, ಯಾಕಂದರೆ ಅದು ಪಾಪಗಳು ತೊಳೆಯಲ್ಪಡುವ ಹಂತವಾಗಿದೆ. ನಮ್ಮ ರಕ್ಷಣೆಗೆ ಬಾಪ್ತಿಸ್ಮವು ಅವಶ್ಯವಾದದ್ದು ಎಂದು ಈ ಎಲ್ಲಾ ವಿಚಾರಗಳಿಂದ ಕಂಡುಬರುತ್ತದೆ.

ಈ ರೀತಿಯಲ್ಲಿ ಮತ್ತು ಈ ಕಾರಣಕ್ಕಾಗಿ ನೀವು ಬಾಪ್ತಿಸ್ಮ ಹೊಂದಿರುವಿರೋ? "ಈಗ ನೀನೇಕೆ ಸಾವಕಾಶ ಮಾಡುತ್ತೀ? ಎದ್ದು ಆತನ ಹೆಸರನ್ನು ಹೇಳಿ ಕೊಳ್ಳುವವನಾಗಿ ಬಾಪ್ತಿಸ್ಮ ಮಾಡಿಸಿಕೊಂಡು ನಿನ್ನ ಪಾಪಗಳನ್ನು ತೊಳೆದುಕೋ" (ಅಪೊಸ್ತಲರ ಕೃತ್ಯ 22:16).

---

## ಮೂರು ಮುಖ್ಯವಾದ ಜನನಗಳು

ನೈಸರ್ಗಿಕ ಜನನ: ಈ ಪ್ರಾಪಂಚಿಕ ಜಗತ್ತಿನೊಳಗೆ ಪ್ರವೇಶಕ್ಕೆಸಾಧನವಾಗಿ ಜನನದ ನಿಯಮವನ್ನು ದೇವರು ಆಜ್ಞಾಪಿಸಿದನು. ಪ್ರತಿಯೊಂದು ತನ್ನ ತನ್ನ ಜಾತಿಗನುಸಾರವಾಗಿ ಉತ್ಪಾದಿಸಬೇಕೆಂಬುದು ಆದಿಯಲ್ಲಿ ಆತನಿಂದ ಹೇಳಿದ, ಬದಲಾಗದ ಮತ್ತು ದೊಡ್ಡದಾದ ನಿಯಮವಾಗಿದೆ. ಈ ಆಜ್ಞೆಯು ಮಾನವ ಕುಟುಂಬಕ್ಕೂ ಅನ್ವಯಿಸಲ್ಪಟ್ಟಿತು. ಹೀಗೆ ಅದ್ಭುತದಿಂದ ಪ್ರಾರಂಭವಾದ ಜೀವನವು ನೈಸರ್ಗಿಕ ಜನನದಿಂದ ನೆಲೆಗೊಳಿಸಲ್ಪಟ್ಟಿತು. ನಾವು ಅದನ್ನು ನೈಸರ್ಗಿಕ ವಾದದ್ದೆಂದು ಮಾತಾಡುತ್ತೇವೆ ಆದರೆ ಅದ್ಭುತಕರವಾದದ್ದೆಂದು ಮಾತಾಡುವದಿಲ್ಲ. ಆದಾಗ್ಯೂ ಈ ಪ್ರಾಕೃತಿಕ ಘಟನೆಗಿಂತ ಹೆಚ್ಚು ಅದ್ಭುತವಾದ ಅದ್ಭುತ ಕಾರ್ಯವು ಯಾವುದೂ ಇಲ್ಲ.

ನೂತನ ಜನನ: ಯೇಸು ತನ್ನ ರಾಜ್ಯದೊಳಗೆ ಪ್ರವೇಶಿಸುವ ಸಾಧನವು ಸಹ ಜನನವೆಂದು ಆಜ್ಞಾಪಿಸಿದನು. ನಿಕೊದೇಮನೊಂದಿಗೆ ತನ್ನ ಸಂವಾದದಲ್ಲಿ ಹೊಸದಾಗಿ ಹುಟ್ಟುವ ಅವಶ್ಯಕತೆಯನ್ನು ಯೇಸು ಒತ್ತಿ ಹೇಳಿದನು (ಯೋಹಾನ 3:1-5). ಯೆಹೂದ್ಯರ ನಾಯಕನಾಗಿ, ನಿಕೊದೇಮನು ದೈಹಿಕ, ಪ್ರಾಕೃತಿಕ ಜನನದಲ್ಲಿ ಮತ್ತು ಅದರಿಂದ ತನಗೆ ಕೊಡಲ್ಪಟ್ಟ ಅವಕಾಶಗಳಲ್ಲಿ ಹೆಚ್ಚು ನಂಬಿಕೆಯಿಡುವ ಭಾವನೆಯುಳ್ಳವನಾಗಿದ್ದನು. ಒಬ್ಬನು ಹೊಸದಾಗಿ ಹುಟ್ಟಬೇಕೆಂದು ಅವನಿಗೆ ಯೇಸು ಹೇಳಿದಾಗ ಅವನು ದೈಹಿಕ ಜನನದ ಬಗ್ಗೆ

ಯೋಚಿಸಿದನು. ಯೇಸುವು ತಾನು ಮಾತಾಡುತ್ತಿದ್ದ ಎರಡನೆಯ ಜನನವು ದೈಹಿಕವಾದದ್ದಲ್ಲ ಆದರೆ ನೀರಿನಿಂದಲೂ ಆತ್ಮನಿಂದಲೂ ಹುಟ್ಟುವದಾಗಿದೆ ಯೆಂಬುದನ್ನು ನಿಶ್ಚಿತಪಡಿಸಿದನು.

ಯೇಸುವಿನ ಭಾಷೆಯ ಅರ್ಥವನ್ನು ನಾವು ನಿರ್ಧರಿಸುವುದು ಹೇಗೆ? ಯಾವುದೇ ರೀತಿಯ ರೂಪಕವನ್ನು ಉಪಯೋಗಿಸದೇ ರಕ್ಷಣೆಯ ಶರತ್ತುಗಳನ್ನು ಯೇಸು ಹೇಳಿದ ಮಹಾ ನಿಯೋಗಕ್ಕೆ ನಾವು ಹೋಗಬಹುದು. "ನಂಬಿ ಬಾಪ್ತಿಸ್ಮ ಮಾಡಿಸಿಕೊಳ್ಳುವವನು ರಕ್ಷಣೆ ಹೊಂದುವನು" (ಮಾರ್ಕ 16:16) ಎಂದು ಆತನು ಹೇಳಿದನು. ಇದು ಯೋಹಾನ 3:5ರ ಮೇಲೆ ಪ್ರೇರೇಪಿತ ವ್ಯಾಖ್ಯಾನವನ್ನು ಒದಗಿಸುವುದು. ಉದಾಹರಣೆಯನ್ನು ನೋಡಲಿಕ್ಕೆ ಅಪೊಸ್ತಲರ ಕೃತ್ಯಗಳ ಗ್ರಂಥಕ್ಕೆ ನಾವು ಹೋಗಬಹುದು ಮತ್ತು ಪ್ರೇರೇಪಿತ ಜನರ ಮೇಲ್ವಿಚಾರಣೆಯಲ್ಲಿ ಸಂಭವಿಸಿದ ಮಾರ್ಪಡುವಿಕೆಯ ಸಂಗತಿಗಳನ್ನು ಗಮನಿಸಬಹುದು. ವಿಶಿಷ್ಟವಾದ ವಿಷಯವು ಅಪೊಸ್ತಲರ ಕೃತ್ಯ 2ರಲ್ಲಿ ದಾಖಲೆ ಮಾಡಲ್ಪಟ್ಟಿದೆ. ಆ ದಿನದಂದು ರಕ್ಷಿಸಲ್ಪಟ್ಟವರು ಹೊಸದಾಗಿ ಹುಟ್ಟಿದವರೇ ಆಗಿದ್ದರು. ಅವರೇನು ಮಾಡಿದರು? ಪೇತ್ರನಿಂದ ಪ್ರಸಂಗಿಸಲ್ಪಟ್ಟ ಪ್ರಸಂಗವನ್ನು ಅವರು ಕೇಳಿದರು, ಅದನ್ನು ನಂಬಿದರು, ತಮ್ಮ ಪಾಪಗಳಿಗಾಗಿ ಮಾನಸಾಂತರ ಹೊಂದಿದರು ಮತ್ತು ಆ ಪಾಪಗಳ ಪರಿಹಾರಕ್ಕಾಗಿ ಬಾಪ್ತಿಸ್ಮ ಮಾಡಿಸಿಕೊಂಡರು. ಹೀಗೆ ಮಾಡುವಲ್ಲಿ ಅವರು ಹೊಸದಾಗಿ ಹುಟ್ಟಿದರು. ನೀರಿನಿಂದಲೂ ಆತ್ಮನಿಂದಲೂ ಹುಟ್ಟಿದರು. ಪುನಃ ಹುಟ್ಟಲು ಒಬ್ಬ ವ್ಯಕ್ತಿಯು ಈ ಆಜ್ಞೆಗಳನ್ನು ಮತ್ತು ಪ್ರೇರೇಪಿತ ಉದಾಹರಣೆಗಳನ್ನು ಅನುಸರಿಸತಕ್ಕದ್ದು: (1) ಪರಿಶುದ್ಧಾತ್ಮನು ಹೊಸ ಒಡಂಬಡಿಕೆಯ ಮುಖಾಂತರ ಮಾತಾಡುವಂತೆ ಆತನ ಬೋಧನೆಯನ್ನು ಕೇಳುವುದು, (2) ಆತ್ಮನ ಸಾಕ್ಷಿಯನ್ನು ನಂಬುವುದು, (3) ಮಾನಸಾಂತರಪಡ ಬೇಕೆಂದು ಹೇಳಿದ ಪರಿಶುದ್ಧಾತ್ಮನ ಬುದ್ಧಿವಾದಕ್ಕೆ ವಿಧೇಯ ನಾಗುವುದು ಹಾಗೂ (4) ಪರಿಶುದ್ಧಾತ್ಮನ ಆಜ್ಞೆಯಂತೆ ನಡಿಸಲ್ಪಟ್ಟು ತನ್ನ ಪಾಪಗಳ ಪರಿಹಾರಾರ್ಥವಾಗಿ ನೀರಿನಲ್ಲಿ ಬಾಪ್ತಿಸ್ಮ ಹೊಂದುವುದು. ಆವನು ಈ ಸಂಗತಿ ಗಳನ್ನು ಪೂರೈಸಿದಾಗ, ನೀರಿನಿಂದಲೂ ಆತ್ಮನಿಂದಲೂ ಹುಟ್ಟುವನು. ಆಗ ಅವನು ಕ್ರಿಸ್ತನ ರಾಜ್ಯದ ಪ್ರಜೆಯಾಗುವನು.

ಅಲೌಕಿಕ ಜನನ: ಯೇಸುವು "ಸತ್ತವರೊಳಗಿಂದ ಮೊದಲು ಎದ್ದು ಬಂದವನು" (ಕೊಲೊಸ್ಸೆ 1:18). ಸಮಾಧಿಯೊಳಗಿಂದ ಪುನರುತ್ಥಾನವು ಜನನದಂತೆ ಹೇಳಲ್ಪಟ್ಟಿದೆ (ಯೇಸುವಿನ ಪುನರುತ್ಥಾನವು ಸತ್ತವರೊಳಗಿಂದ ಜನನದಂತೆ ಹೇಳಲ್ಪಟ್ಟಿದ್ದರೆ, ಆಗ ಬಾಪ್ತಿಸ್ಮದ ನೀರಿನಿಂದ ನಮ್ಮ ಪುನರುತ್ಥಾನವು ನೀರಿನ ಜನನ ಎಂದು ಕರೆಯಲ್ಪಡಲು ಎಷ್ಟು ಸುಲಭವಾಗುವದೆಂದು ನೋಡುತ್ತೇವೆ).

ಈ ಮೂರು ಜನನಗಳಲ್ಲಿ ಪ್ರತಿಯೊಬ್ಬನನ್ನು ನೂತನ ಜೀವನದ ಪ್ರಾರಂಭ ದೊಳಗೆ ಹೇಗ ಪರಿಚಯಿಸುತ್ತದೆ ಎಂಬುದು ಆಸಕ್ತಿಯುಳ್ಳದ್ದಾಗಿದೆ. ಅಲೌಕಿಕ ಜನನವು ಕೊಳೆಯುವಿಕೆಯ ಬಂಧನದಿಂದ ದೇಹದ ವಿಮೋಚನೆಯಾಗಿದೆ. ಅದು ಸಮಾಧಿಯ ಕತ್ತಲೆ ಸೆರೆಯಿಂದ ಜನನವಾಗಿದೆ. ಆದ್ದರಿಂದ ಅಕ್ಷಯವಾದ, ಮತ್ತು ಮಹಿಮೆಯುಳ್ಳ ದೇಹವಾಗುತ್ತದೆ.

© 2009 Truth for Today